# ನಗರಸಭಾ ಕಾರ್ಯಾಲಯ ದಾಂಡೇಲಿ

ನಂ.ನಸದಾಂ.ದಾಶಾ.ವಿವ.ಟೆಪ್ರ.2009-10 ದಿನಾಂಕ : 05-03-2010

## ಟೆಂಡರ ಪ್ರಕಟಣೆ

ದಾಂಡೇಲಿ ನಗರ ಸಭೆಯಿಂದ 2010-11 ನೇ ಸಾಲಿಗಾಗಿ ನೀರು ಸರಬರಾಜು, ನೈರ್ಮಲೀಕರಣಕ್ಕಾಗಿ, ವಿದ್ಯುದ್ಧೀಕರಣಕ್ಕಾಗಿ ಸಾಮಗ್ರಿಗಳು, ಹಾಗೂ ಕಚೇರಿಯ ಉಪಯೋಗಕ್ಕಾಗಿ ಬೇಕಾಗುವ ಸ್ಟೇಶ್ನರಿ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ ರೇಟ್ ಕಂಟ್ರಾಕ್ಟ ಟೆಂಡರುಗಳನ್ನು ಈ ಕೆಳಗೆ ನಮೂದಿಸಿದ ಶರ್ತುಗಳಿಗೆ ಒಳಪಟ್ಟು ದ್ವಿ ಪ್ರತಿಯಲ್ಲಿ ಕರೆಯಲಾಗಿದ್ದು, ಮೊಹರ್ ಬಂದ ಟೆಂಡರುಗಳನ್ನು ಪೌರಾಯುಕ್ತರು ನಗರ ಸಭೆ ದಾಂಡೇಲಿರವರು ದಿನಾಂಕ 06-04-2010 ರಂದು ಸಾಯಂಕಾಲ 4.00 ಗಂಟೆಯವರೆಗೆ ಸ್ವೀಕರಿಸುವರು. ಟೆಂಡರ್ ಫಾರ್ಮಗಳ ಬಗ್ಗೆ ಅರ್ಜಿಯನ್ನು ದಿನಾಂಕ 03-04-2010 ರವರೆಗೆ ಸಲ್ಲಿಸಬಹುದಾಗಿದ್ದು ಖಾಲಿ ಟೆಂಡರು ಫಾರ್ಮಗಳನ್ನು ದಿನಾಂಕ 05-04-2010 ರವರೆಗೆ ಕಚೇರಿ ವೇಳೆಯಲ್ಲಿ ಪೂರೈಸಲಾಗುವುದು.

### <u>ಶರ್ತುಗಳು</u>

1. ಟೆಂಡರು ಹಾಕಲು ಇಚ್ಛೆಯುಳ್ಳವರು ಖಾಲಿ ಟೆಂಡರು ಫಾರ್ಮ ಬೆಲೆ ರೂ 500-00 + ಶೇ 12.5 VAT ಪಾವತಿಸಿ ಟೆಂಡರು ಫಾರ್ಮ ಪಡೆಯಬಹುದಾಗಿದೆ.

2. ಟೆಂಡರ ಹಾಕುವವರು ಠೇವಣಿಯನ್ನು ಪ್ರತ್ಯೇಕವಾಗಿ ನೀರು ಸರಬರಾಜು ಸಾಮಗ್ರಿಗಳಿಗೆ ರೂ 15000-00, ನೈರ್ಮಲೀಕರಣ ಸಾಮಗ್ರಿಗಳಿಗೆ ರೂ 5000-00, ವಿದ್ಯುದ್ಧೀಕರಣ ಸಾಮಗ್ರಿಗಳಿಗೆ ರೂ 12000-00, ಹಾಗೂ ಸ್ಟೇಶ್ನರಿ ಸಾಮಗ್ರಿಗಳಿಗೆ ರೂ 10000-00 ಠೇವಣಿಗಳನ್ನು ಭರಣಾ ಮಾಡಿದ ಬಗ್ಗೆ ಬ್ಯಾಂಕ ಡಿ ಡಿ ಅಡಕ ಇಡತಕ್ಕದ್ದು.

3. ಅವಧಿ ಮೀರಿ ಬಂದ ಹಾಗೂ ಕರಾರುಗಳಿದ್ದ ಟೆಂಡರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

4. ಟೆಂಡರಗಳನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.

5. ಟೆಂಡರುದಾರರು ವ್ಯಾಟ (VAT) ಸರ್ಟಿಫಿಕೇಟು ಮತ್ತು ಇನಕಮ್ ಟ್ಯಾಕ್ಸ್ ಕ್ಲೀಯರೆನ್ಸ್ ಹೊಂದಿರಬೇಕಾಗಿದ್ದು ದರಗಳು ಎಲ್ಲ ತೆರಿಗೆಗಳನ್ನು ಒಳಗೊಂಡಿರಬೇಕು ಹಾಗೂ ಸಾಮಗ್ರಿಗಳನ್ನು ನಗರಸಭೆಯ ದಾಸ್ತಾನು ವಿಭಾಗಕ್ಕೆ ಪೂರೈಸುವುದು ಟೆಂಡರುದಾರರ ಜವಾಬ್ದಾರಿಯಾಗಿರುತ್ತದೆ.

6. ಸಾಮಗ್ರಿ ಗುಣಮಟ್ಟದ ಬಗ್ಗೆ ರೂ 50/- ರ ಛಾಪಾ ಕಾಗದದ ಮೇಲೆ ಒಪ್ಪಿಗೆ ಪತ್ರ ಬರೆದುಕೊಡಬೇಕು.

7. ನಗರಸಭೆಯು ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಣ ಸಂದಾಯ ಮಾಡಲಾಗುವುದು.

8. ಗುತ್ತಿಗೆದಾರರು ಸಮರ್ಪಕವಾಗಿ ಕೆಲಸ ನಿರ್ವಹಿಸದೇ ಇರುವುದು ಕಂಡು ಬಂದಲ್ಲಿ ಯಾವ ಮುನ್ಸೂಚನೆಯನ್ನು ನೀಡದೇ ಗುತ್ತಿಗೆಯನ್ನು ರದ್ದು ಮಾಡಿ, ಇಟ್ಟ ಠೇವಣಿಯನ್ನು ನಗರಸಭೆಗೆ ಜಮಾ ಮಾಡಿಕೊಳ್ಳಲಾಗುವುದು.

9. ಟೆಂಡರದಾರರು ಟೆಂಡರದಲ್ಲಿ ನಮೂದಿಸುವ ದರವು ದಿನಾಂಕ 31-03-2011 ರವರೆಗೆ ಚಾಲ್ತಿಯಲ್ಲಿರತಕ್ಕದ್ದು.

10. ನಗರಸಭೆಗೆ ಅವಶ್ಯವಿರುವ ಹಾಗೂ ಪೂರೈಸಲು ಬೇಕಾಗಿರುವ ನೀರು ಸರಬರಾಜು, ನೈರ್ಮಲೀಕರಣ, ವಿದ್ಯುದ್ಧೀಕರಣ ಸಾಮಗ್ರಿಗಳು, ಹಾಗೂ ಸ್ಟೇಶ್ನರಿ ಸಾಮಗ್ರಿಗಳ ವಿವರವಾದ ಲಿಸ್ಟನ್ನು ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಉಗ್ರಾಣ ವಿಭಾಗದಿಂದ ಪಡೆಯಬಹುದಾಗಿದೆ.

11. ಹೆಚ್ಚಿನ ಮಾಹಿತಿ ಬೇಕಾದಲ್ಲಿ ನಗರಸಭೆಯ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ವಿಶೇಶ ಸೂಚನೆ :- ಪ್ರತಿಯೊಬ್ಬರು ಟೆಂಡರದಾರರು ಪ್ರತಿಯೊಂದು ಐಟಂಗಳಿಗೂ ದರ ನಮೂದಿಸತಕ್ಕದ್ದು. ಇಲ್ಲದಿದ್ದಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

| ಸಹಿ ಇದೆ | ಸಹಿ ಇದೆ |
| --- | --- |
| ಅಧ್ಯಕ್ಷರು | ಪೌರಾಯುಕ್ತರು |
| ನಗರಸಭೆ ದಾಂಡೇಲಿ | ನಗರಸಭೆ ದಾಂಡೇಲಿ |

# ನಗರ ಸಭಾ ಕಾರ್ಯಾಲಯ ದಾಂಡೇಲಿ

ನಂ.ನಸದಾಂ.ದಾಶಾ.ವಿವ.ಟೆಪ್ರ.2009-10 ದಿನಾಂಕ : 05-03-2010

## ಟೆಂಡರ ಪ್ರಕಟಣೆ

ಈ ನಗರ ಸಭೆಯಿಂದ 2010-11 ನೇ ಸಾಲಿಗಾಗಿ Fund Based Accounting System ಗೆ ಅವಶ್ಯವಾಗಿ ಬೇಕಾಗಿರುವ ಎಲ್ಲಾ KMF ರಜಿಸ್ಟರಗಳು, ವೋಚರಗಳು ಹಾಗೂ ನಮೂನೆಗಳನ್ನು ಮುದ್ರಿಸುವ ಬಗ್ಗೆ ರೇಟ್ ಕಂಟ್ರಾಕ್ಟ ಟೆಂಡರುಗಳನ್ನು ಈ ಕೆಳಗೆ ನಮೂದಿಸಿದ ಶರ್ತುಗಳಿಗೆ ಒಳಪಟ್ಟು ದ್ವಿ ಪ್ರತಿಯಲ್ಲಿ ಕರೆಯಲಾಗಿದ್ದು, ಮೊಹರ್ ಬಂದ ಟೆಂಡರುಗಳನ್ನು ಪೌರಾಯುಕ್ತರು ನಗರ ಸಭೆ ದಾಂಡೇಲಿರವರು ದಿನಾಂಕ 06-04-2010 ರಂದು ಸಾಯಂಕಾಲ 4.00 ಗಂಟೆಯವರೆಗೆ ಸ್ವೀಕರಿಸುವರು. ಟೆಂಡರ್ ಫಾರ್ಮಗಳ ಬಗ್ಗೆ ಅರ್ಜಿಯನ್ನು ದಿನಾಂಕ 03-04-2010 ರವರೆಗೆ ಸಲ್ಲಿಸಬಹುದಾಗಿದ್ದು ಖಾಲಿ ಟೆಂಡರು ಫಾರ್ಮಗಳನ್ನು ದಿನಾಂಕ 05-04-2010 ರಂದು ಕಚೇರಿ ವೇಳೆಯಲ್ಲಿ ಪೂರೈಸಲಾಗುವುದು.

## ಶರ್ತುಗಳು

1. ಟೆಂಡರು ಹಾಕಲು ಇಚ್ಚೆಯುಳ್ಳವರು ಖಾಲಿ ಟೆಂಡರು ಫಾರ್ಮ ಬೆಲೆ ರೂ 500+ ಶೇ 12.5 VAT ಪಾವತಿಸಿ ಟೆಂಡರು ಫಾರ್ಮ ಪಡೆಯಬಹುದಾಗಿದೆ.
2. ಟೆಂಡರ ಹಾಕುವವರು ಠೇವಣಿ ಹಣ ರೂ 10,000-00 ನಗರ ಸಭೆಯಲ್ಲಿ ಭರಣಾ ಮಾಡಿದ ಬಗ್ಗೆ ರಸಿದಿ ಅಥವಾ ಬ್ಯಾಂಕ ಡಿ ಡಿ ಅಡಕ ಇಡತಕ್ಕದ್ದು.
3. ಅವಧಿ ಮೀರಿ ಬಂದ ಹಾಗೂ ಕರಾರುಗಳಿದ್ದ ಟೆಂಡರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
4. ಟೆಂಡರು ಮಂಜೂರಾದಲ್ಲಿ ಆದೇಶ ಮುಟ್ಟಿದ ದಿನಾಂಕದಿಂದ ಕಾಲಕಾಲಕ್ಕೆ ನಗರಸಭೆಯಿಂದ ನೀಡಿದ ಆದೇಶದನ್ವಯ FBAS ಗೆ ಅವಶ್ಯವಿರುವ ಎಲ್ಲ KMF ರಜಿಸ್ಟರ್ಗಳು, ವೋಚರಗಳು ಹಾಗೂ ನಮೂನೆಗಳು ಪೂರೈಸತಕ್ಕದ್ದು.
5. KMF ರಜಿಸ್ಟರ್ಗಳು, ವೋಚರಗಳು ಹಾಗೂ ನಮೂನೆಗಳು ನಗರಸಭೆಗೆ ಕಚೇರಿ ವೇಳೆಯಲ್ಲಿ ಬಂದು ಕಚೇರಿಯಲ್ಲಿ ನೋಡತಕ್ಕದ್ದು.
6. ಟೆಂಡರಗಳನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರ ಸಭೆಯು ಕಾಯ್ದಿರಿಸಿಕೊಂಡಿದೆ.
7. ಟೆಂಡರದಾರರು ಟೆಂಡರದಲ್ಲಿ ನಮೂದಿಸುವ ದರವು ದಿನಾಂಕ 31-03-2011 ರವರೆಗೆ ಚಾಲ್ತಿಯಲ್ಲಿರತಕ್ಕದ್ದು.

ಸಹಿ ಇದೆ
ಅಧ್ಯಕ್ಷರು
ನಗರಸಭೆ ದಾಂಡೇಲಿ

ಸಹಿ ಇದೆ
ಪೌರಾಯುಕ್ತರು
ನಗರಸಭೆ ದಾಂಡೇಲಿ